**ECA ನಂ 4/2020**
**ಪಿ.ಡಬ್ಲ್ಯು -1**

ದಿನಾಂಕ : 24–07–2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟಿ ಸವಾಲು ೧ ನೇ ಎದುರುದಾರ **ಪರ** ಶ್ರೀ: ಎಸ್ ಜಿ ಪಿ ವಕೀಲರಿಂದ :</u>

ಈಗ ಸಾಕ್ಷಿಗೆ ಒಂದು Employee state insurance corporations ತಮ್ಮ ಹೆಸರಿಗೆ ಇರುವ ಪ್ರತಿಯನ್ನು ತೋರಿಸಲು ಒಪ್ಪುತ್ತಾರೆ ಅದನ್ನು ನಿ ಆರ್ 1 ಅಂತಾ ಗುರುತಿಸಲಾಯಿತು. ನಾನು ಇದರಡಿಯಲ್ಲಿ ಪ್ರತಿಫಲವನ್ನು ತೆಗೆದುಕೊಂಡಿಲ್ಲಾ. ಅದರಲ್ಲಿ ನಾವು ಪ್ರತಿಫಲ ಹಣ ತೆಗೆದುಕೊಳ್ಳಬಹುದು ಎಂದರೆ ಹೌದು. ದಿಃ 09-02-2019 ರಂದು ಈ ಘಟನೆ ಬೆಳಗ್ಗೆ 4-6 ಗಂಟೆ ಒಳಗೆ ಆಗಿದೆ. ನಮ್ಮ ಮುಂದೆ ಎಪಿ-16/ಟಿಸಿ 1113 ಲಾರಿ ಹೊರಟಿತ್ತು ಎಂದರೆ ಸರಿ. ಅದು ವೇಗವಾಗಿ ಹೋಗುತ್ತಿತ್ತು ಎಂದರೆ ಸರಿ. ಅ ಲಾರಿ ಒಮ್ಮೇಲೆ ಬ್ರೆಕ ಹಾಕಿದರು ಎಂದರೆ ಸರಿ. ಅದರಿಂದ ನನ್ನ ವಾಹನ ನಿಯಂತ್ರಣ ತಪ್ಪಿ ಅದಕ್ಕೆ ಗುದ್ದಿದೆ ಎಂದರೆ ಸರಿ. ಲಾರಿ ನಿಲ್ಲಿಸಲು ಯಾವುದೇ ಸಿಗ್ನಲ್ ಅಲ್ಲಿ ಹಾಕಿರಲಿಲ್ಲಾ, ಯಾವುದೇ ರಸ್ತೆ ನಿಯಮಗಳನ್ನು ಪಾಲಿಸದೆ ಬ್ರೇಕ ಹಾಕಿದ್ದರು. ನಾನು ರೂ 4 ಲಕ್ಷ ಹಣ ಖರ್ಚು ಮಾಡಿದ್ದೇನೆ. ನಾನು ಅರ್ಜಿಯಲ್ಲಿ ಎಷ್ಟು ಹಣ ಕೇಳಿದ್ದೇನೆ ನೆನಪಿಲ್ಲಾ. ನನ್ನದು 4 ಲಕ್ಷ ಚಿಲ್ಲರೆ ಖರ್ಚು ಆಗಿದೆ. ಈಗ ನಾನು ಯಾವುದೇ ಚಾಲನೆ ಕೆಲಸ ಮಾಡುತ್ತಿಲ್ಲಾ. ನನಗೆ ಈಗ ಚಾಲನೆ ಮಾಡಲು ಅಗುವುದಿಲ್ಲಾ. ಒಂದೇ ಕಾಲು 3 ಕಡೆ ಮುರಿದಿದೆ. ನಾನು ಚಾಲನೆ ಮಾಡುವ ಸ್ಥಿತಿಯಲ್ಲಿ ಇದ್ದರು ಕೂಡಾ ಪರಿಹಾರ ಹಣ ಪಡೆಯಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ತಿಂಗಳಿಗೆ 30 ಸಾವಿರ ಚಾಲಕ ವೃತ್ತಿ ಮಾಡಿ ದುಡಿಯುತ್ತಿದ್ದೆ. ನಾನು ಅರ್ಜಿಯಲ್ಲಿ 25 ರಿಂದ 30 ಸಾವಿರ ಅಂತಾ ಬರೆಯಿಸಿದ್ದೇನೆ. ನಾನು ತಿಂಗಳಿಗೆ ರೂ 12,576/- ದುಡಿಯುತ್ತಿದ್ದೆ

ಅಂತಾ ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ನಾನು ತಿಂಗಳಿಗೆ 25-30 ಸಾವಿರ ದುಡಿಯುತ್ತಿದ್ದ ಅಂತಾ ದಾಖಲೆ ಕೊಟ್ಟಿಲ್ಲಾ. ಅಪಘಾತ ಆದ ಕೂಡಲೇ 1 ನೇ ಎದುರುದಾರರು ಅಲ್ಲಿಗೆ ಬಂದರು. ಎಫ್ ಐ ಆರ್ ಮಾಡುವುದು ಬೇಡಾ ನಾವು ಪರಿಹಾರ ಕೊಡುತ್ತೇವೆ ಅಂತಾ 1 ನೇ ಎದುರುದಾರರು ಹೇಳಿದರು ಅಂತಾ ನಾನು ನನ್ನ ಅರ್ಜಿಯಲ್ಲಿ ಬರೆದಿದ್ದು ಆ ಬಗ್ಗೆ ದಾಖಲೆ ಇಲ್ಲಾ. ಅವರು ಆ ರೀತಿ ಯಾವುದೇ ಮಾತು ಕೊಟ್ಟಿಲ್ಲಾ ನಾನು ಕೇಸ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ ದುಡಿಯುವ ಶಕ್ತಿ ಇದ್ದರು ಕೂಡಾ ಇಲ್ಲಾ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು 4 ಲಕ್ಷ ಖರ್ಚು ಮಾಡಿದಕ್ಕೆ ಅರ್ಧ ದಾಖಲೆ ಕೊಟ್ಟಿದ್ದೇನೆ ಅರ್ಧ ಇಲ್ಲಾ. ನಾನು ಆಸ್ಪತ್ರೆಯಲ್ಲಿ ಇದ್ದಾಗ ಬಿಲ್ಲುಗಳನ್ನು ಕಳೆದಿದ್ದಾರೆ. ವಿಜಯವಾಡ ಟ್ರಸ್ಟ ಆಸ್ಪತ್ರೆ, ಭುವನೇಶ್ವರದ ಆಸ್ಪತ್ರೆಯ ಬಿಲ್ಲಗಳನ್ನು ಕಳೆದಿದ್ದಾರೆ. ನಾನು ಈ ವಿಷಯ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿ ಅರ್ 1 ರ ಪ್ರಕಾರ ನನಗೆ ಪರಿಹಾರ ತೆಗೆದುಕೊಳ್ಳಲು ಹಕ್ಕು ಇರುವುದರಿಂದ ನಾನು 1 ನೇ ಎದುರುದಾರರ ವಿರುದ್ದ ಪರಿಹಾರ ಕೇಳಲು ಬರುವುದಿಲ್ಲಾ ಎಂದರೆ ಸರಿಯಲ್ಲ.

<u>ಪಾಟಿ ಸವಾಲು 2 ನೇ ಎದುರುದಾರ **ಪರ** ಶ್ರೀ:ಎಸ್ ಎಮ್ ಪಿ ವಕೀಲರಿಂದ :</u>

ಮೇಲೆ ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

Sd/-

(**ಉಂಡಿ ಮಂಜುಳಾ ಶಿವಪ್ಪ** )

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಲಿಂಗಸೂಗುರು.**